ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 111-114
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ರಂಗಗೀತೆಗಳ ಪುನರುಜ್ಜೀವನ: ನವಮೌಖಿಕ ಮಾಧ್ಯಮಗಳ ಪಾತ್ರ

**ಶ್ರೀದೇವಿ**

ಸಂಶೋಧಕರು, ಸಂಗೀತ ಮತ್ತು ನೃತ್ಯ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

***Abstract:***

*ರಂಗಭೂಮಿ ಬಹುಮುಖಿ ಕಲೆಯಾಗಿದೆ. ಅನೇಕ ಕಲೆಗಳನ್ನು ತನ್ನೊಳಗೆ ಅಡಗಿಸಿಕೊಂಡು ಸಮಗ್ರತೆಯ ಅನುಭವವನ್ನು ಪ್ರೇಕ್ಷಕರಿಗೆ ತಲುಪಿಸುತ್ತದೆ. ಜನಪದ, ವೃತ್ತಿ, ಹವ್ಯಾಸಿ ರಂಗಭೂಮಿ ಎಲ್ಲಾ ಸಂದರ್ಭದಲ್ಲೂ ಇದರ ಛಾಯೆ ಕಾಣಬಹುದು. ಆಯಾಯ ಕಾಲಕ್ಕೆ ತಕ್ಕಂತೆ ಈ ರಂಗಭೂಮಿಗಳ ಬೆಳವಣಿಗೆಗೆ ಪೂರಕವಾಗಿ ನಾಟಕ ಕೃತಿ, ಬೆಳಕು, ವೇಷಭೂಷಣ, ರಂಗಸಜ್ಜಿಕೆ, ಸಂಗೀತದಂತಹ ಅಂಶಗಳು ಪೂರಕವಾಗಿ ಕೆಲಸ ಮಾಡಿವೆ. ಅದರಲ್ಲೂ ವೃತ್ತಿರಂಗಭೂಮಿಯಲ್ಲಿ ಪ್ರಮುಖ ಸ್ಥಾನ ಪಡೆದ ಸಂಗೀತ ದೇಸಿ ಮತ್ತು ಶಾಸ್ತ್ರೀಯ ನೆಲೆಯ ಮಟ್ಟುಗಳನ್ನು ಯಶಸ್ವಿಯಾಗಿ ಬಳಸಿಕೊಂಡು ಬೆಳವಣಿಗೆಗೊಂಡಿತು.*

**Keywords:** *ನಾಟಕ, ರಂಗಭೂಮಿ, ರಂಗಗೀತೆ, ಸಂಗೀತ, ಗ್ರಾಮೋಫೋನ್.*

## ಪೀಠಿಕೆ

ರಂಗಭೂಮಿಯಲ್ಲಿ ಸಂಗೀತವು ಪ್ರಧಾನ ಪಾತ್ರವಹಿಸುತ್ತದೆ. ರಂಗಸಂಗೀತವಿಲ್ಲದೆ ವೃತ್ತಿ ರಂಗಭೂಮಿಗೆ ಅಸ್ತಿತ್ವವಿಲ್ಲವೆನ್ನುವಷ್ಟರ ಮಟ್ಟಿಗೆ ಸಂಗೀತ ಪ್ರಾಧಾನ್ಯತೆ ಪಡೆದುಕೊಂಡಿದೆ. ವೃತ್ತಿರಂಗ ಮಂಡಳಿಗಳ ಹೆಸರಿನಲ್ಲೇ 'ಸಂಗೀತ' ಪದ ಬಳಕೆ ಕಡ್ಡಾಯವೆಂಬಂತೆ ಬಳಕೆಗೊಳ್ಳುತ್ತಿತ್ತು. ಹೀಗೆ ಉಚ್ಛ್ರಾಯ ಸ್ಥಿತಿ ತಲುಪಿದ್ದ ರಂಗಸಂಗೀತ ಕಾಲಾಂತರದಲ್ಲಿ ಅವಸಾನಕ್ಕೆ ಒಳಪಟ್ಟಿತು. ನಂತರದಲ್ಲಿ ರೂಢಿಗೆ ಬಂದ ಹವ್ಯಾಸಿ ರಂಗಭೂಮಿ ರಂಗಸಂಗೀತ ಬಳಕೆಯಲ್ಲಿ ಅನೇಕ ಮಾರ್ಪಾಡನ್ನು ಮಾಡಿಕೊಂಡಿತು ಹಾಗೂ ಹೊಸ ಬಗೆಯ ಸಂಗೀತ ಮತ್ತು ಪರಿಕರಗಳನ್ನು ಬಳಸಲು ಆರಂಭವಿಟ್ಟಿತು. ವೃತ್ತಿರಂಗಭೂಮಿಯ ಅಸ್ತಿತ್ವದಂತಿದ್ದ ರಂಗಸಂಗೀತ, ರಂಗೀತೆಗಳ ಅವಸಾನ ಕಂಡು ಅವುಗಳ ಸಂಗ್ರಹಕ್ಕೆ ಮುಂದಾದ ಅನೇಕ ಉದಾಹರಣೆಗಳಿವೆ. ರಂಗ ಸಂಗೀತವನ್ನು ರಂಗಭೂಮಿಯಾಚೆ ಹೊಸ ಬಗೆಯಲ್ಲಿ ಬಳಸಿದ ಅನೇಕ ಪ್ರಯೋಗಗಳನ್ನು ಕಾಣಬಹುದಾಗಿದೆ. ಸಂಕ್ಷಿಪ್ತವಾಗಿ ಇದರ ಪರಿಚಯ ವನ್ನು ಈ ಲೇಖನದಲ್ಲಿ ಮಾಡಿಲಾಗಿದೆ.

ವೃತ್ತಿರಂಗಭೂಮಿಯಿಂದ ನಂತರದ ದಿನಗಳಲ್ಲಿ ಹವ್ಯಾಸಿ ರಂಗಭೂಮಿ, ಸಿನೆಮಾರಂಗವೂ ಪ್ರಭಾವಕ್ಕೆ ಒಳಗಾಯಿತು. ವಸ್ತು ಮತ್ತು ಸಂಗೀತದ ವಿಚಾರದಲ್ಲಿ ಇವು ಹೆಚ್ಚು ಪ್ರಭಾವಕ್ಕೆ ಒಳಗಾದವು. ವೃತ್ತಿರಂಗಭೂಮಿಯಲ್ಲಿ ಬಳಕೆಗೊಂಡಿದ್ದ ರಂಗ ಗೀತೆಗಳು ಸಿನೆಮಾ ಗೀತೆಗಳಾಗಿ ಬಳಕೆಗೊಂಡವು. ರಂಗನಾಟಕ ಹಾಗೂ ಸಿನೆಮಾಗಳಲ್ಲಿ ಬಳಕೆಗೊಂಡಿದ್ದ ಹಾಡುಗಳನ್ನು ಪ್ರತ್ಯೇಕವಾಗಿ ದಾಖಲಿಸಿ ಪ್ರಸಾರ ಮಾಡಲಾಯಿತು. 20ನೇ ಶತಮಾನದ ಆರಂಭ ದಿಂದಲೇ ಈ ಪ್ರಯತ್ನಗಳು ಶುರುವಾದವು. ಇಲ್ಲಿ ವ್ಯಾಪಾರ ಮತ್ತು ಜನರಿಗೆ ಈ ಹಾಡುಗಳನ್ನು

***Please cite this article a:*** ಶ್ರೀದೇವಿ. (2023). ಕನ್ನಡ ರಂಗಗೀತೆಗಳ ಪುನರುಜ್ಜೀವನ: ನವಮೌಖಿಕ ಮಾಧ್ಯಮಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(1), 111–114.

ತಲುಪಿಸುವ ಎರಡೂ ರೀತಿಯ ಉದ್ದೇಶಗಳಿದ್ದವು. ಈ ಕೆಲಸವನ್ನು ಗ್ರಾಮಫೋನ್ ಕಂಪೆನಿಗಳು ಮಾಡಿದವು. ವೃತ್ತಿರಂಗ ಸಂಗೀತವು ಶಾಸ್ತ್ರೀಯ ಸಂಗೀತವನ್ನೇ ಹೆಚ್ಚು ಅವಲಂಬಿಸಿದ್ದವು. ಆ ಕಾರಣಕ್ಕಾಗಿಯೇ ಶಾಸ್ತ್ರೀಯ ಸಂಗೀತದಲ್ಲಿ ಹೆಚ್ಚು ಜನಪ್ರಿಯತೆ ಪಡೆದ ಠುಮ್ರಿ, ದ್ರುಪದ್, ಗಜಲ್, ಖಯಾಲ್‌ಗಳು ಗಾಯಕರಿಂದ ಹಾಡಿಸಿ ರಂಗಭೂಮಿಯಲ್ಲಿದ್ದ ಜನಪ್ರಿಯ ರಂಗಗೀತೆಗಳನ್ನು ಮುದ್ರಿಸಿ ಜನರಿಗೆ ತಲುಪಿಸಿದರು.

ಗ್ರಾಮೋಫೋನಿನ ಮೂಲಕ ತಮ್ಮ ಹಾಡುಗಳನ್ನು ಹಾಡಲು ಕಲಾವಿದರು ಹವಣಿಸಿದರೆ, ನಾಟಕ ಕಂಪೆನಿಗಳು ಸ್ವತಃ ರೆಕಾರ್ಡ್ ಕಂಪೆನಿಗಳನ್ನು ಸಂಪರ್ಕಿಸಿ ತಮ್ಮ ನಾಟಕದ ಹಾಡುಗಳನ್ನು ದಾಖಲಿಸಲು ಆಹ್ವಾನ ನೀಡುತ್ತಿದ್ದರು. ಈ ಸಂದರ್ಭದಲ್ಲಿ ರೆಕಾರ್ಡ್ ಕಂಪೆನಿಗಳ ಶ್ರಮ ಮತ್ತು ಕಂಪೆನಿಗಳ ಆಸಕ್ತಿಯ ಕಾರಣ ಮರಾಠಿ ರಂಗಗೀತೆಗಳಂತೆ ಕನ್ನಡದ ಸಾವಿರಾರು ಹಾಡುಗಳು ಗ್ರಾಮೋಫೋನಿನಲ್ಲಿ ರೆಕಾರ್ಡ್ ಆಗಿದ್ದು ಮಹತ್ವವಾದ ಸಂಗತಿಯಾಗಿದೆ. ಈ ಕೆಲಸವನ್ನು ಕೊಲಂಬಿಯಾ ಮತ್ತು ಓಡಿಯನ್ ಕಂಪೆನಿಗಳು ಆಸಕ್ತಿವಹಿಸಿ ಧ್ವನಿಮುದ್ರಿಕೆಗಳನ್ನು ಮಾಡಿದವು. ಎಚ್.ಎಂ.ವಿ ಕಂಪೆನಿಯ ಸಾಹಸವೆಂಬಂತೆ ಆ ಸಂದರ್ಭಕ್ಕಾಗಲೇ ಗ್ರಾಮೋಫೋನಿನಲ್ಲಿ ಬರುತ್ತಿದ್ದ ಸಿನಿಮಾ ಹಾಡುಗಳೊಂದಿಗೆ ಸ್ಥಾನ ಪಡೆಯಲು ಆರಂಭವಾಯಿತು. ಈ ಕಂಪೆನಿಯು ಉತ್ತರ ಕರ್ನಾಟಕದ ನಾಟಕ ಕಂಪೆನಿಗಳಲ್ಲಿದ್ದ ಪ್ರತಿಭಾವಂತ ಗಾಯಕರನ್ನು ಹುಡುಕಿ ಧ್ವನಿಮುದ್ರಿಕೆ ಮಾಡುವಲ್ಲಿ ಮುಂಬಯಿಯ ಸಂಯೋಜಕರಾದ ರೂಪಜಿರವರು ಪ್ರಮುಖರು. ಇಲ್ಲಿ ರಂಗಗೀತೆಗಳಿಗೆ ಗ್ರಾಮೋಫೋನಿನಲ್ಲಿ ಪ್ರಮುಖಸ್ಥಾನ ಪ್ರಾಪ್ತವಾಯಿತು.

ಕರ್ನಾಟಕದ ಕಲಾವಿದರೊಂದಿಗೆ ಉತ್ತಮ ಸಂಬಂಧ ಉಳಿಸಿಕೊಂಡಿದ್ದ ಜಿ.ಎನ್. ಜೋಶಿಯವರು ಎಚ್.ಎಂ.ವಿ ಕಂಪೆನಿಯ ಮ್ಯಾನೇಜರ್ ರಮಾಕಾಂತ ರೂಪಜಿ ಯವರೊಂದಿಗೆ ಕೈ ಜೋಡಿಸಿ ನಿರ್ವಹಣೆಯ ಮೂಲಕ ಅವರಿಗೆ ಸಾಥ್ ನೀಡಿದರು "1930 ಸುಮಾರಿಗೆ 'ರಾಣಿರುದ್ರಮ್ಮ' ನಾಟಕದಲ್ಲಿ ಅಭಿನಯಿಸುತ್ತ ಹಾಡುತ್ತಿದ್ದ ಪ್ರಸಿದ್ಧ ಗಾಯಕಿ ಅಮೀರಬಾಯಿ ಅವರಿಗೆ, ಬಳಿಕ ಅವರ ಅಕ್ಕ ಗೋಹರ್ ಬಾಯಿ ಅವರಿಗೆ ಎಚ್.ಎಂ.ವಿ. ಕಂಪನಿ ರೆಕಾರ್ಡಿಂಗ್‌ಗೆ ಆಹ್ವಾನಿಸಿತು. ಅಮಿರ್ ಬಾಯಿ ಅವರು ಚಿಕ್ಕೋಡಿ ಶಿವಲಿಂಗ ಸ್ವಾಮಿಯವರು ರಚಿಸಿದ 'ರಾಣಿ ರುದ್ರಮ್ಮ' ನಾಟಕದ 'ನಾ ಪೇಳುವೆ ನಿನಗೊಂದುಪಾಯ' ಎಂಬ ರಂಗಗೀತೆ (1933) ಕೊಲಂಬಿಯಾ ಕಂಪೆನಿಗೆ ಹಾಡಿದ ಹಾಡಾಗಿದೆ". ಎಂಬ ಅಭಿಪ್ರಾಯಕ್ಕೆ ಸಿನೆಮಾ ಚರಿತ್ರಾಕಾರರು ಬರುತ್ತಾರೆ.[1] 1935 ರಲ್ಲಿ ಬಸವರಾಜ ಮನಸೂರರಿಗೆ ಎಂ.ಎಚ್.ವಿ ಕಂಪೆನಿಯವರು ಆಹ್ವಾನವಿತ್ತು ಅವರಿಂದ 'ಭಕ್ತಸಖೂ', 'ಬಾಜಿರಾವ್ ಪೇಶ್ವೆ', 'ಪಾರ್ವತಿ ಸತ್ವಪರೀಕ್ಷೆ' ಮೊದಲಾದ ಹಾಡುಗಳು ಧ್ವನಿ ಮುದ್ರಿತಗೊಂಡವು ನಂತರ ಮಲ್ಲಿಕಾರ್ಜುನ ಮನಸೂರ ಅವರು ಶಾಸ್ತ್ರೀಯ ಸಂಗೀತ ಆಧಾರಿತ ಹಾಡುಗಳನ್ನು ಎಚ್.ಎಂ.ವಿ. ಮುದ್ರಿಸಿಕೊಂಡಿತು.

ಪ್ರಚಾರಗೊಂಡ ಹಾಡುಗಳ ಜನಪ್ರಿಯತೆ ಕಂಡು ಅದೇ ವರ್ಷದಲ್ಲಿ ಓಡಿಯನ್ ರೆಕಾರ್ಡಿಂಗ್ ಕಂಪೆನಿಯೂ ಬಸವರಾಜ ಮನಸೂರರನ್ನು ಕರೆಸಿ ಕನ್ನಡ ನಾಟಕದ ಹಾಡುಗಳನ್ನು ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲಿ ಹಾಡಿದ್ದು ಅತ್ಯಂತ ಜನಪ್ರಿಯತೆಗೆ ಕಾರಣವಾಯಿತು. ಅಂದು ಶಾಸ್ತ್ರೀಯ ಸಂಗೀತದ ಒಲವು ಕಂಪೆನಿ ಮತ್ತು ಜನರಲ್ಲಿ ಆಸಕ್ತಿಕರ ಸಂಗತಿಯಾಗಿದ್ದ ಕಾರಣ ಅವು ಜನಮನ್ನಣೆ ಪಡೆಯಲು ಅಷ್ಟು ಸಮಯ ಹಿಡಿಯಲಿಲ್ಲ. ಈ ಬೆಳವಣಿಗೆಯನ್ನು ಗಮನಿಸಿದ ಅನೇಕ ರಂಗಗೀತೆ ಹಾಡುಗಾರರು ತಮ್ಮ ರಂಗಗೀತೆಗಳನ್ನು ಗ್ರಾಮೋಫೋನಿನಲ್ಲಿ ರೆಕಾರ್ಡ್ ಮಾಡಲು ಮುಂದಾದರು. ಹಲವು ವಿದ್ವಾಂಸರ

---

[1] ರಹಮತ್ ತರೀಕೆರೆ, *ಅಮೀರ್‌ಬಾಯಿ ಕರ್ನಾಟಕಿ.* ಪುಟ. 166)

ಅಭಿಪ್ರಾಯದಂತೆ "1955 ರಲ್ಲಿ ಸೋನುಬಾಯಿ ದೊಡ್ಡಮನಿಯವರು ಶ್ರೀಕಂಠಶಾಸ್ತ್ರಿಗಳ 'ಬಸವೇಶ್ವರ', 'ಅಕ್ಕಮಹಾದೇವಿ', ಗರುಡರ 'ಶರಣಬಸವ', 'ಎನ್ಕೆ', ಅವರ 'ರೇಣುಕಾ', ನಾಟಕಗಳನ್ನು ಕೊಲಂಬಿಯಾ, ಗ್ರಾಮೊಫೋನ್ ಕಂಪೆನಿಯ ಮೂಲಕ ಧ್ವನಿಮುದ್ರಿಸಿ ಗ್ರಾಮೀಣ ಜನಕ್ಕೆ ತಲುಪಿಸುವಲ್ಲಿ ಪ್ರಥಮವೆನಿಸಿದರು.[2] ನಾಟಕಗಳಲ್ಲಿ ರಂಗಗೀತೆಗಳನ್ನು ಕಥೆಯ ಮತ್ತು ಅಭಿನಯದ ಭಾಗವಾಗಿ ಆಸ್ವಾಧಿಸುತ್ತಿದ್ದ ಪ್ರೇಕ್ಷಕರಿಗೆ, ಗ್ರಾಮೊಫೋನ್‌ಗಳಲ್ಲಿ ಅದೇ ಹಾಡುಗಳನ್ನು ಕೇಳುವುದು ಭಿನ್ನವಾದ ಅನುಭವವನ್ನು ನೀಡಿತು. ಇದು ಪ್ರೇಕ್ಷರಕ ಕತೆಯಾದರೆ ಇನ್ನೊಂದು ಕಡೆ ನಾಟಕ ಕಂಪೆನಿಗಳು ತಮ್ಮ ನಾಟಕಗಳ ಹಾಡುಗಳನ್ನು ರೆಕಾರ್ಡ್ ಮಾಡಿಸುವುದು ಹೆಮ್ಮೆಯ ಸಂಗತಿಯಾಗಿ ಕಂಡಿತು. ರಂಗಗೀತೆಗಳನ್ನು ಹಾಡುತ್ತಿದ್ದ ಗಾಯಕರು ತಮ್ಮ ಪ್ರತಿಭೆಯನ್ನು ರೆಕಾರ್ಡ್‌ಗಳಲ್ಲಿ ದಾಖಲಿಸಲು ಹೆಚ್ಚು ಆಸಕ್ತಿವಹಿಸಿ ಆ ಮೂಲಕ ಸಿನಿಮಾಗಳಲ್ಲಿ ಅವಕಾಶ ಪಡೆಯಲು ಮುಂದಾದರು. ರಂಗಭೂಮಿಯ ಅನೇಕ ಸಂಗತಿಗಳು ಸಿನೆಮಾವಾಗಿ ಪಲ್ಲಟಗೊಳ್ಳಲು ಗ್ರಾಮೋಫೋನ್ ಒಂದು ಸೇತುವೆಯಾಗಿ ಕಾರ್ಯ ನಿರ್ವಹಿಸಿತು.

ಗ್ರಾಮೋಫೋನ್‌ಗೆ ಮಾರುಹೋಗಿದ್ದ ಪ್ರೇಕ್ಷಕರನ್ನು ತಲುಪಲು ಗಾಯಕರು ಕ್ಯಾಸೆಟ್ ಮತ್ತು ಸಿ.ಡಿ ಯಲ್ಲಿ ಹಾಡಿದರು. ಪ್ರೇಕ್ಷಕರು ಈ ಪ್ರಕ್ರಿಯೆಗೂ ಒಗ್ಗಿಕೊಂಡರು. ಇಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಕೇಳಿಸಿಕೊಳ್ಳಲು ಸಿ.ಡಿ ಮತ್ತು ಕ್ಯಾಸೆಟ್‌ಗಳು ನೆರವಾದವು. ಸಿ.ಡಿ–ಕ್ಯಾಸೇಟ್ ಗ್ರಾಮೋಫೋನ್‌ಗಳ ಮೂಲಕ ಕನ್ನಡ–ಮರಾಠಿ ಹಾಡುಗಳನ್ನು ಸಂಗ್ರಹಿಸುವ ಕೆಲಸವನ್ನು ಅನೇಕ ಕಂಪೆನಿಗಳು ಮಾಡಿದವು. ಶಾಸ್ತ್ರೀಯ ಸಂಗೀತಗಾರರಾದ ಬಸವರಾಜ ಮನಸೂರ, ಮಲ್ಲಿಕಾರ್ಜುನ ಮನಸೂರ, ಗುರುರಾವ್ ದೇಶಪಾಂಡೆ ಮುಂತಾದವರು ರಂಗಗೀತೆಗಳ ಧ್ವನಿ ಮುದ್ರಿಸಿದರು. ಇಲ್ಲಿ ಅವರಿಗೆ ವಿಶೇಷ ಅಸ್ತಿತ್ವದೊರೆಯಿತು. ಗೌರವ ಹೆಚ್ಚಾಯಿತು. ಆದಾಯಕ್ಕೆ ಮೂಲವು ಆಯಿತು. ರೇಡಿಯೊ ಮೂಲಕ ತಮ್ಮ ಪ್ರತಿಭೆಗೆ ಸಾಕ್ಷಿಯಂತಿದ್ದ ರಂಗಗೀತೆಗಳನ್ನು ಜನರಿಗೆ ತಲುಪಿಸುವ ಅನೇಕ ಪ್ರಯೋಗಗಳನ್ನು ಗಾಯಕರು ಮಾಡಿದರು "ಸೋನುಬಾಯಿ ದೊಡ್ಡಮನಿಯವರು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ನೆಲೆಗಟ್ಟಿನ ಮೇಲೆ ಸೃಜಿತವಾದ ರಂಗಗೀತೆಗಳು ಅವ್ಯಾಹತವಾಗಿ ರೇಡಿಯೋ ಮತ್ತು ಡಿಸ್ಕ್‌ಗಳ ಮೂಲಕ ಸಾಗಿದಬಂದವು"[3] ಹೀಗೆ ರೇಡಿಯೋ ಮೂಲಕವೂ ರಂಗಗೀತೆಗಳು ಜನಮಾನಸಕ್ಕೆ ಹತ್ತಿರವಾದವು. ಆಧುನಿಕ ಸಂದರ್ಭದಲ್ಲಿ ಸಿ.ಡಿ–ಡಿ.ವಿ.ಡಿಗಳ ಮೂಲಕ ದೊಡ್ಡಮಟ್ಟದಲ್ಲಿ ರಂಗಗೀತೆಗಳು ಪ್ರಸಾರವಾದವು. ಆ ಮೂಲಕ ಒಂದೆಡೆ ಸಂಗ್ರಹವಾಯಿತೆಂದರೆ ತಪ್ಪಾಗಲಾರದು ಕಾಲಕಳೆದಂತೆ ಗ್ರಾಮೋಫೋನ್‌ನ ಹಾಡುಗಳನ್ನು ಕ್ಯಾಸೆಟಿಗೆ ರೂಪಾಂತರಿಸಲಾಯಿತು. ಟೇಪುಗಳಲ್ಲಿ ಮುದ್ರಿತವಾಗಿದ್ದ ಹಾಡುಗಳು ಟೇಪ್‌ರೆಕಾರ್ಡರ್‌ಗಳ ಮೂಲಕ ಜನರು ಕೇಳಲಾರಂಭಿಸಿದರು ನಂತರದಲ್ಲಿ ಆವಿಷ್ಕಾರಗಳಿಗೆ ಅನುಗುಣವಾಗಿ ಅದೇ ಹಾಡುಗಳು ಸಿಡಿ–ಡಿವಿಡಿಗಳಿಗೆ ರೂಪಾಂತರಗೊಂಡವು. ಗ್ರಾಮೋಫೋನಿನಲ್ಲಿ ಒಂದೆರಡು ಹಾಡುಗಳಿದ್ದರೆ. ಕ್ಯಾಸೆಟುಗಳಲ್ಲಿ 10 ರಿಂದ 20 ಹಾಡುಗಳ ಸಂಗ್ರಹವಿತ್ತು. ಆದರೆ ಸಿಡಿ–ಡಿವಿಡಿಗಳಲ್ಲಿನ ನೂರಾರು ರಂಗಗೀತೆಗಳನ್ನು ಒಟ್ಟಿಗೆ ಜನರನ್ನು ತಲುಪಲು ಕಾರಣವಾಯಿತು. ಈ ನೆಲೆಯಲ್ಲಿ ಕನ್ನಡದಲ್ಲಿ ನೆನಪಿಡುವ ಏಣಗಿಬಾಳಪ್ಪನವರು ರಂಗಗೀತೆಗಳ ಉಳಿವಿಗಾಗಿ (2002–03ರಲ್ಲಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಂಗಗೀತೆಗಳ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಆಯೋಜಿಸಿತ್ತು. ಅದರ ಮುಂದಾಳು ಏಣಗಿಬಾಳಪ್ಪನವರು ಅದರಲ್ಲಿ ಗಾಯಕ – ಗಾಯಕಿಯರಾದ ಪಂ. ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ,

[2] ಗೋಪಾಲ ವಾಜಪೇಯಿ, *ಕನ್ನಡಿಗರು ಕಳೆದುಕೊಂಡ ಕಂಚಿನಕಂಠ ಸೋನುಬಾಯ ದೊಡ್ಡಮನಿ* ಪು.27

[3] ಸುರೇಶ ಕುಲಕರ್ಣಿ *ಚಲನಚಿತ್ರ ಸಂಗೀತ ಕಲೆ, ಸಂಸ್ಕೃತಿ.* ಇಲ್ಲಿ ಪ್ರೊ. ಸದಾನಂದ ಕನವಳ್ಳಿ ಅಭಿನಂದನ ಸಂಪುಟ. ಪು.322

ಪಂ.ಗಣಪತಿಭಟ್ ಹಾಸಣಗಿ, ಪಂ.ಸೋಮನಾಥ್ ಮರಡೂರ, ನೀಲಾ.ಎಂ. ಕೊಡ್ಲಿ, ಈಶ್ವರಪ್ಪ ಮಿಣಚಿ, ಶ್ರೀಕಾಂತ ಕುಲಕರ್ಣಿ ಮುಂದಾದವರು ರಂಗಗೀತೆಗಳನ್ನು ಪ್ರಸ್ತುತಪಡಿಸಿದರು. ಈ ಹಾಡುಗಳನ್ನು ರೆಕಾರ್ಡ್ ಮಾಡಿಸಿ ಕೊನೆಯವರೆಗೂ ಕಾಪಾಡುವ ಪ್ರಯತ್ನ ಯಶಸ್ಸು ಪಡೆಯಿತು. ಇಲ್ಲಿ ನೂರು ವರ್ಷಗಳಿಂದಾಚೆ ರಚನೆಗೊಂಡಿದ್ದಂತಹ ಅನೇಕ ಮಹನೀಯರ ರಚನೆಗಳನ್ನು ಧ್ವನಿಮುದ್ರಣಕ್ಕಾಗಿ ಆಯ್ಕೆ ಮಾಡಿಕೊಂಡಿದ್ದರು. ಇಲ್ಲಿನ ರಚನೆಗಳು ಬಹುಪಾಲು ವೃತ್ತಿರಂಗಭೂಮಿಯದ್ದಾಗಿದ್ದವು. ಇವು ಬಹುಕಾಲದ ವರೆಗೆ ಬಹುಜನಪ್ರಿಯತೆಯನ್ನು ಗಳಿಸಿ ಕೊಂಡಿದ್ದಂತಹ ಹಾಡುಗಳಾಗಿದ್ದವು. ಪರಂಪರೆಯಿಂದ ಬಂದ ಈ ರಂಗಗೀತೆಗಳ ಚಾಲು ಮತ್ತು ಧಾಟಿಯನ್ನು ತಿಳಿದಿದ್ದ ಬಾಳಪ್ಪನವರು ಈ ಸಂದರ್ಭದಲ್ಲಿ ಕಾಳಜಿವಹಿಸಿದ್ದರು. ಆ ಕಾರಣಕ್ಕಾಗಿಯೇ ಅವು ತಮ್ಮ ತಾಜಾತನವನ್ನು ಉಳಿಸಿಕೊಳ್ಳುವಲ್ಲಿ ಸಾಧ್ಯವಾಯಿತು. ರಂಗಗೀತೆಗಳ ಪುನರುಜ್ಜೀವನಕ್ಕೂ ಕಾರಣವಾಯಿತು.

ಈ ಪ್ರಕ್ರಿಯೆಯ ಭಾಗವಾಗಿ 2009ನೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಅಕಾಡೆಮಿ ಸಹಯೋಗದಲ್ಲಿ ನಡೆಯಿತು. 'ಉತ್ತರ ಕರ್ನಾಟಕದ ರಂಗಗೀತೆಗಳು: ಶರಣು ಶರಣಾರ್ಥಿ' ಎಂಬ ಶಿರ್ಷಿಕೆಯಡಿಯಲ್ಲಿ ಸುಮಾರು 218 ರಂಗಗೀತೆಗಳನ್ನು ಸಿ.ಡಿಯಲ್ಲಿ ಲಹರಿ ರೆಕಾರ್ಡಿಂಗ್ ರಂಗತಜ್ಞ ಬಸವರಾಜ ಮಲಶೆಟ್ಟಿ ಅವರ ಪ್ರಯತ್ನವೂ ಇಲ್ಲಿ ಗಮನಾರ್ಹವಾದುದು. ಇವರು ರಂಗಗೀತೆಗಳನ್ನು ನಾಟಕ ಅಕಾಡೆಮಿಗೆ ಸಂಗ್ರಹಿಸಿ ಕೊಟ್ಟರು. ರಂಗಭೂಮಿಯ ಹಿನ್ನೆಲೆಯಿದ್ದ ಕಾರಣ ಅದರ ಬಗೆಗೆ ಕಾಳಜಿ ಸಹಜವಾಗಿಯೇ ಇತ್ತು ಆರ್.ಡಿ.ಕಾಮತ್ ಮತ್ತು ಯೋಗಾನರಸಿಂಹಮೂರ್ತಿಯವರು ಜಬೇದಾ ಬಾಯಿಯವರು ಹಾಡಿದ 20 ರಂಗಗೀತೆಗಳನ್ನು ಸಂಗ್ರಹಿಸಿ ಕ್ಯಾಸೆಟ್ ರೂಪದಲ್ಲಿ ತಂದರು. ಇಲ್ಲಿ ಈ ಗಾಯಕಿಯೂ ಮತ್ತುಷ್ಟು ಪ್ರಸಿದ್ಧರಾದರು.

ಚಲನಶೀಲತೆಯೆಂಬುದು ಯಾವುದೇ ವಿಚಾರ ದಲ್ಲಿ ಸಹಜವಾದುದು ಅದರಲ್ಲೂ ಕಲೆ ಮತ್ತು ಸಾಹಿತ್ಯದ ವಿಷಯದಲ್ಲಂತು ಅದನ್ನು ಒಪ್ಪಲೇಬೇಕು. ರಂಗಗೀತೆಯು ಇದಕ್ಕೆ ಹೊರತಲ್ಲ. ಇಲ್ಲಿ ಹೊಸತು ಸೇರಿಕೊಂಡರೆ ಹಳೆಯದು ಅಥವಾ ಮೂಲ ಮರೆಗೆ ಸರಿಯುತ್ತದೆ. ಇಲ್ಲಿ ಮೂಲವನ್ನು ಕಾಪಿಟ್ಟುಕೊಳ್ಳವ ಅನಿವಾರ್ಯತೆ ಎಂದಿಗೂ ಪ್ರಸ್ತುತ ವಿಷಯವಾಗಿದೆ. ಈ ನೆಲೆಯಲ್ಲಿ ರಂಗಗೀತೆಗಳ ಭವ್ಯ ಪರಂಪರೆ ಈ ದಿಸೆಯಲ್ಲಿ ಕನ್ನಡ ಸಂದರ್ಭದಲ್ಲಿ ಅನೇಕ ಪ್ರಯೋಗಗಳಾಗಿವೆ. ರಂಗಭೂಮಿಯಾಚೆ ರಂಗ ಗೀತೆಗಳು ಗ್ರಾಮೋಫೋನ್, ರೇಡಿಯೋ, ಸಿನೆಮಾ, ಟಿ.ವಿ ಕ್ಯಾಸೆಟ್, ಸಿ.ಡಿಗಳಲ್ಲಿ ಸಂಗ್ರಹಗೊಂಡು ಇತ್ತೀಚೆಗೆ ಯುಟ್ಯೂಬ್, ಫೇಸ್‌ಬುಕ್ ಚಾನಲ್ ಗಳಲ್ಲೂ ಕೂಡ ರಂಗಗೀತೆಗಳು ಪ್ರಸಾರ ವಾಗುತ್ತಿರುವುದು ರಂಗಗೀತೆಗಳ ಸಂಗ್ರಹ ಮತ್ತು ಸಂರಕ್ಷಣೆಗೆ ಉತ್ತಮ ಪ್ರಯತ್ನವಾಗಿದೆ.

**ಪರಾಮರ್ಶನ ಗ್ರಂಥಗಳು**


- ಏಣಗಿ ಬಾಳಪ್ಪ & ಶಿರೀಷ ಜೋಷಿ. (2009). *ಉತ್ತರ ಕರ್ನಾಟಕದ ರಂಗಗೀತೆಗಳು.* ದಾಮಿನಿ ಸಾಹಿತ್ಯ ಪ್ರಕಾಶನ.
- *ಗೋಪಾಲ* ವಾಜಪೇಯಿ. (1993). *ಕನ್ನಡಿಗರು ಕಳೆದುಕೊಂಡ ಕಂಚಿನಕಂಠ ಸೋನುಬಾಯಿ ದೊಡ್ಡಮನಿ.* ರಂಗನೇಪಥ್ಯ ಪತ್ರಿಕೆ.
- ನಾಗರಾಜ್ ಎಂ.ಎನ್. (1997). *ನಾಂದಿ.* ಜೈ ಪ್ರಕಾಶನ.
- ರಹಮತ್ ತರೀಕೆರೆ. (2013). *ಅಮೀರ್‌ಬಾಯಿ ಕರ್ನಾಟಕಿ.* ಪಲ್ಲವ ಪ್ರಕಾಶ.
- ಸತ್ಯನಾರಾಯಣ ಜಿ. (2010). *ರಂಗಕೈಪಿಡಿ: ರಂಗಭೂಮಿಯ ಬಗ್ಗೆ ಒಂದು ಕಿರು ಪರಿಚಯ.* ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್.
- ಸುರೇಶ ಕುಲಕರ್ಣಿ. (2009). ಚಲನಚಿತ್ರ ಸಂಗೀತ ಕಲೆ, ಸಂಸ್ಕೃತಿ. ***ಇಲ್ಲಿ*** ಪ್ರೊ. ಸದಾನಂದ ಕನವಳ್ಳಿ ಅಭಿನಂದನ ಸಂಪುಟ. ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ.